# ಪೋರನ ಸಾಹಸ!



ಪುಟ್ಟ ಹುಡುಗನೊಬ್ಬ ಹೆಬ್ಬಾವನ್ನು ಕೊರಳಲ್ಲಿ ಸುತ್ತಿಕೊಂಡಿರುವ ದೃಶ್ಯವನ್ನು ನೋಡಿದರೆ ಯಾರೇ ಆದರೂ ಬೆಚ್ಚಿಬೀಳಬೇಕು. ಆದರೆ ಕೇವಲ ಮೂರು ವರ್ಷ ವಯಸ್ಸಿನ ಚಾರ್ಲಿ ಪಾರ್ಕರ್‌ಗೆ ಭಯ ಎನ್ನುವುದು ಗೊತ್ತೇ ಇಲ್ಲ.

ಇನ್ನೂ ಚಿಕ್ಕವನಿದ್ದಾಗಲೇ ಈ ಪೋರನಿಗೆ ಹಾವು, ಮೊಸಳೆ ಮುಂತಾದ ಅಪಾಯಕಾರಿ ಪ್ರಾಣಿಗಳೊಂದಿಗೆ ಸರಸವಾಡುವುದು ಎಂದರೆ ಪಂಚಪ್ರಾಣ. ಸುಮಾರು 8 ಅಡಿ ಉದ್ದದ ಹೆಬ್ಬಾವು ಪ್ಯಾಬ್ಲೊ ಈತನ ಆಪ್ತಮಿತ್ರ. ಇದರ ಮುಖಕ್ಕೆ ತನ್ನ ತುಟಿಯನ್ನೊತ್ತಿ ಮುತ್ತಿಕ್ಕುವುದು, ತನ್ನ ಕೈಯನ್ನಿಟ್ಟು ಶೇಕ್ ಹ್ಯಾಂಡ್ ಕೊಡುವುದು, ಕೊರಳಿಗೆ ಮಾಲೆಯಂತೆ ಸುತ್ತಿ ಕೊಳ್ಳುವುದು ಪಾರ್ಕರ್‌ಗೆ ಬಹಳ ಇಷ್ಟ.

ಮೊಸಳೆಯೊಂದಿಗೆ ನೀರಿನಲ್ಲಿ ಚೆನ್ನಾಟವಾಡುವುದು ಸಹ ಈ ಬಾಲಕನ ಮತ್ತೊಂದು ಮೆಚ್ಚಿನ ಕೆಲಸ. ತಂದೆ ಗ್ರೆಗ್ ಪಾರ್ಕರ್, ಆಸ್ಟ್ರೇಲಿಯಾದ ವಿಕ್ಟೋರಿಯಾದಲ್ಲಿರುವ ಬಲ್ಲಾರತ್ ವೈಲ್ಡ್‌ಲೈಫ್ ಪಾರ್ಕ್‌ನ ಮಾಲಿಕ. 'ಹಾವು, ಮೊಸಳೆ ಮುಂತಾದ ಅಪಾಯಕಾರಿ ಪ್ರಾಣಿಗಳೊಂದಿಗೆ ಇಷ್ಟು ಪುಟ್ಟ ಹುಡುಗ ಆಡುವುದು ಅಪಾಯವಲ್ಲವೇ' ಎನ್ನುವ ಪ್ರಶ್ನೆಗೆ ಗ್ರೆಗ್, 'ನಾವು ಯಾವತ್ತೂ ಚಾರ್ಲಿಯು ಪ್ರಾಣಿಗಳೊಂದಿಗೆ ಆಟ ಆಡುವುದಕ್ಕೆ ಪ್ರೋತ್ಸಾಹ ನೀಡಿಲ್ಲ; ವನ್ಯಪ್ರಾಣಿಗಳೊಂದಿಗಿನ ಕಾಡಿನ ಜೀವನ ನಮ್ಮ ಕುಲಕಸುಬು. ಇದು ಮಗನಿಗೆ ವಂಶ ಪಾರಂಪರ್ಯವಾಗಿ ಬಂದಿದೆ ಅಷ್ಟೇ' ಎಂದು ಉತ್ತರಿಸುತ್ತಾನೆ. ಹಾವು ಮೊಸಳೆಗಳ ಗುಣ ಸ್ವಭಾವಗಳನ್ನೆಲ್ಲಾ ಚೆನ್ನಾಗಿ ಅರಿತಿರುವ ಚಾರ್ಲಿ ಪಾರ್ಕರ್ ಈಗ ಆಸ್ಟ್ರೇಲಿಯಾದ ಅತ್ಯಂತ ಪುಟ್ಟ ಅರಣ್ಯಾಧಿಕಾರಿ!

■ ಪ್ರಿಯಾಂಕ ವಿ.ಹೆಚ್.

